ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

NAAC Accredited with "A" Grade 2022
ಸಿಂಡಿಕೇಟ ವಿಭಾಗ

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-30/2022-23/ A-86(a) ದಿನಾಂಕ: 9 JAN 2023

"ಗೌಪ್ಯ"

ಕರ್ನಾಟಕ ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯನ್ನು **ದಿನಾಂಕ 09 ಜನೇವರಿ, 2023** ರಂದು **ಸಾಯಂಕಾಲ 04:30 ಗಂಟೆಗೆ** ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಭೆಯಲ್ಲಿ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1. | ಪ್ರೊ. ಕೆ. ಬಿ. ಗುಡಸಿ, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2. | ಶ್ರೀ. ಕೃಷ್ಣಮೂರ್ತಿ ಬಿ.ಆರ್., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ. | ಸದಸ್ಯರು |
| 3. | ಡಾ.(ಶ್ರೀಮತಿ). ಚಂದ್ರಮ್ಮ ಎಮ್, ಡೀನರು | ಸದಸ್ಯರು |
| 4. | ಶ್ರೀಮತಿ. ಹಂಸವೇಣಿ ಎನ್., ಧಾರವಾಡ | ಸದಸ್ಯರು |
| 5. | ಡಾ. ಕೆ. ಡಿ. ಹಾವೇರಿಪೇಟ್, ಸಲಕಿನಕೊಪ್ಪ, ಧಾರವಾಡ | ಸದಸ್ಯರು |
| 6. | ಡಾ(ಶ್ರೀಮತಿ). ಕಮಲಾ ಡಿ. ಧವಳೆ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 7. | ಶ್ರೀ. ಆರ್.ಬಿ. ಗೋಡಿ, ಪ್ರಾಚಾರ್ಯರು, ಕುಂದಗೋಳ (ಆನ್‌ಲೈನ್ ಜೂಮ್ ಅಪ್ಲಿಕೇಶನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 8. | ಪ್ರೊ. ಎಮ್.ಕೆ. ಶೇಖ್, ಪ್ರಾಚಾರ್ಯರು, ಭಟ್ಕಳ (ಆನ್‌ಲೈನ್ ಜೂಮ್ ಅಪ್ಲಿಕೇಶನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 9. | ಡಾ(ಶ್ರೀಮತಿ). ವಿಜಯಲಕ್ಷ್ಮೀ ಎಮ್. ನಾಯ್ಕ, ಪ್ರಾಚಾರ್ಯರು, ಹೊನ್ನಾವರ (ಆನ್‌ಲೈನ್ ಜೂಮ್ ಅಪ್ಲಿಕೇಶನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 10. | ಡಾ. ಸಿ. ಕೃಷ್ಣಮೂರ್ತಿ, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ.ಧಾರವಾಡ | ಸದಸ್ಯರು |
| 11. | ಡಾ. ಸುಭೇಷ ಎಸ್., ಹಣಕಾಸು ಅಧಿಕಾರಿಗಳು, ಕ.ವಿ.ವಿ.ಧಾರವಾಡ (ಆನ್‌ಲೈನ್ ಜೂಮ್ ಅಪ್ಲಿಕೇಶನ್ ಮೂಲಕ ಉಪಸ್ಥಿತರಿದ್ದರು) | ವಿಶೇಷ ಆಹ್ವಾನಿತರು |
| 12. | ಶ್ರೀ. ಯಶಪಾಲ ಕ್ಷೀರಸಾರ, ಭಾ.ಆ.ಸೇ. ಕುಲಸಚಿವರು (ಆಡಳಿತ), ಕ.ವಿ.ವಿ.ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 12 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ಸಾಯಂಕಾಲ 04:30 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನೂತನವಾಗಿ ಸಿಂಡಿಕೇಟ ಸದಸ್ಯರೆಂದು ನೇಮಕಗೊಂಡ ಡಾ.(ಶ್ರೀಮತಿ). ಚಂದ್ರಮ್ಮ ಎಮ್, ಇವರನ್ನು ಪರಿಚಯಿಸಿ ಸ್ವಾಗತಿಸಿದರು. ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು 9/1/23



ಕುಲಪತಿಗಳು

**ಕಲಂ ಸಂಖ್ಯೆ-01: ವಿಷಯ-:** ಕರ್ನಾಟಕ ಸರ್ಕಾರದಿಂದ ರಾಷ್ಟ್ರೀಯ ಯುವ ಜನೋತ್ಸವ ಕಾರ್ಯಕ್ರಮಕ್ಕಾಗಿ ವಿಶ್ವವಿದ್ಯಾಲಯಕ್ಕೆ ಮೂಲಸೌಕರ್ಯಗಳ ದುರಸ್ತಿಗೆ ಮಂಜೂರಿಸಿದ ಅನುದಾನವನ್ನು ನಿಯಮಾನುಸಾರ ಬಳಕೆ ಮಾಡುವ ಕುರಿತು.

**ಟಿಪ್ಪಣಿ:**

ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಇವರು 26ನೇ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮದ ಆಯೋಜನೆಗೆ ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ವಸತಿ ನಿಲಯಗಳ ಹಾಗೂ ಆಡಿಟೋರಿಯಂ, ಇತರೇ ಕೆಲಸಗಳಿಗೆ ಬೇಕಾಗುವ ಮೂಲ ಸೌಕರ್ಯಗಳ ದುರಸ್ತಿಗಾಗಿ ಹಾಗೂ ಇನ್ನಿತರೆ ಕಾಮಗಾರಿ ಕೈಗೊಳ್ಳಲು ರೂ.380.00 ಲಕ್ಷಗಳನ್ನು ಬಿಡುಗಡೆ ಮಾಡಲು ದಿನಾಂಕ 02.01.2023ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅವರಿಗೆ ಕೋರಿಕೆಯನ್ನು ಸಲ್ಲಿಸಲಾಗಿತ್ತು. ಅದರಂತೆ, ಯುವ ಸಬಲೀಲಿಕರಣ ಮತ್ತು ಕ್ರೀಡಾ ಇಲಾಖೆಯು ಸದರಿ ಮೊತ್ತವನ್ನು ಹೆಚ್ಚುವರಿಯಾಗಿ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಒದಗಿಸುವಂತೆ ದಿನಾಂಕ 03.01.2023ರಂದು ಕೋರಿದ್ದರು.

ಸರ್ಕಾರದ ಆರ್ಥಿಕ ಇಲಾಖೆಯು ದಿನಾಂಕ 06.01.2023ರಂದು 26ನೇ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮದ ಪ್ರಯುಕ್ತ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ ಹಾಸ್ಟೇಲ್, ಆಡಿಟೋರಿಯಂ ಹಾಗೂ ಇತರೇ ಮೂಲಸೌಕರ್ಯ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಅವಶ್ಯವಿರುವ ರೂ.2.00 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ ಆಇ 384 ಬಿಆರ್ಎಸ್ 2019 ದಿನಾಂಕ 13.03.2020ರನ್ವಯ ವಿಶ್ವವಿದ್ಯಾಲಯಕ್ಕೆ 2016ರ ಪರಿಷ್ಕೃತ ಯು.ಜಿ.ಸಿ. ಹಿಂಬಾಕಿ ಮೊತ್ತ ಪಾವತಿಗಾಗಿ ಬಿಡುಗಡೆ ಮಾಡಲಾಗಿರುವ ಒಟ್ಟು ರೂ.3895.00 ಲಕ್ಷಗಳ ಅನುದಾನದಲ್ಲಿ ಪ್ರಸ್ತುತ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಯಲ್ಲಿ ಬಾಕಿ ಉಳಿದಿರುವ ರೂ.1656.99 ಲಕ್ಷಗಳ ಅನುದಾನದಿಂದ ಅಗತ್ಯ ಷರತ್ತುಗಳಿಗೊಳಪಟ್ಟು ಭರಿಸಲು ಸಹಮತಿಸಿದೆ ಹಾಗೂ ಈ ಉದ್ದೇಶಕ್ಕೆ ಸೀಮಿತಗೊಂಡಂತೆ ರೂ.2.00 ಕೋಟಿಗಳನ್ನು ಉಪಯೋಗಿಸಿಕೊಂಡ ನಂತರ ಬಾಕಿ ಉಳಿದ ಹಿಂಬಾಕಿ ರೂ.1456.99 ಲಕ್ಷಗಳನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಮರುಜಮೆ ಮಾಡುವುದು ಹಾಗೂ ಮರುಜಮೆ ಮಾಡಬೇಕಾದ ಲೆಕ್ಕಶೀರ್ಷಿಕೆಯ ವಿವರವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು ಎಂದು ತಿಳಿಸಿ, ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ 07.01.2023ರ ಆದೇಶ ಸಂಖ್ಯೆ ಇಡಿ 01 ಹೆಚ್ಓಯು 2023 ರಡಿ ಭರಿಸಲು ಕೆಲವೊಂದು ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

ಈ ವಿಷಯದ ಕುರಿತು ಬಹು ದೊಡ್ಡದಾದ ಈ ಕಾರ್ಯಕ್ರಮದ ಕೆಲವು ಕಾರ್ಯಕ್ರಮಗಳು ವಿಶ್ವವಿದ್ಯಾಲಯದ ಗೋಲ್ಡನ್ ಜ್ಯುಬಿಲಿ ಹಾಲ್, ಗ್ರೀನ್ ಗಾರ್ಡನ್, ಸೃಜನಾ ಆಡಿಟೋರಿಯಂ ಮತ್ತು ಕೆಸಿಡಿ ಫುಟ್‌ಬಾಲ್ ಗ್ರೌಂಡ್‌ದಲ್ಲಿ ಜರುಗುವವು. ಇಡೀ ದೇಶದ ಎಲ್ಲ ರಾಜ್ಯಗಳಿಂದ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಕಲಾರ್ಥಿಗಳು (ಮಹಿಳೆಯರು/ ಪುರುಷರು) ಬರುವವರಿದ್ದಾರೆ. ಸದರಿಯವರಿಗೆ ವಿಶ್ವವಿದ್ಯಾಲಯದ ವಸತಿನಿಲಯಗಳಲ್ಲಿ ವಾಸ್ತವ್ಯದ ವ್ಯವಸ್ಥೆಯನ್ನು ಮಾಡಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸೂಚಿಸಿರುತ್ತಾರೆ. ಕಾರಣ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಸತಿ ಸೌಕರ್ಯ ಕಲ್ಪಿಸುವ



09/1/23
ಕುಲಸಚಿವರು

ಕುಲಪತಿಗಳು

ಸಲುವಾಗಿ ಹಾಸ್ಟೇಲ್, ಆಡಿಟೋರಿಯಂ ಹಾಗೂ ಇತರೇ ಮೂಲಸೌಕರ್ಯ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಅವಶ್ಯವಿರುವ ರೂ.2.00 ಕೋಟಿಗಳನ್ನು ನಿಯಮಾನುಸಾರ ಬಳಕೆ ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದನೆಗೆ ಕಲಂ ತಯಾರಿಸಿ ಮಂಡಿಸಿದೆ.

## ನಿರ್ಣಯ

ಕರ್ನಾಟಕ ಸರ್ಕಾರದಿಂದ ರಾಷ್ಟ್ರೀಯ ಯುವ ಜನೋತ್ಸವ ಕಾರ್ಯಕ್ರಮಕ್ಕಾಗಿ ವಿಶ್ವವಿದ್ಯಾಲಯಕ್ಕೆ ಮೂಲಸೌಕರ್ಯಗಳ ದುರಸ್ತಿಗೆ ಮಂಜೂರಿಸಿದ ಅನುದಾನವನ್ನು ನಿಯಮಾನುಸಾರ ಬಳಕೆ ಮಾಡುವ ಕುರಿತು ಸಿಂಡಿಕೇಟ್‌ದಲ್ಲಿ ಸವಿಸ್ತಾರವಾಗಿ ಚರ್ಚಿಸಲಾಗಿ, ರಾಷ್ಟ್ರೀಯ ಯುವ ಜನೋತ್ಸವ ಕಾರ್ಯಕ್ರಮವನ್ನು ದಿನಾಂಕ 12–16ನೇ ಜನೇವರಿ 2023 ರಂದು ಹುಬ್ಬಳ್ಳಿ–ಧಾರವಾಡದಲ್ಲಿ ನಿಯೋಜಿಸಲಾಗಿದೆ. ಯುವ ಜನೋತ್ಸವದ ಕೆಲವು ಕಾರ್ಯಕ್ರಮಗಳು ವಿಶ್ವವಿದ್ಯಾಲಯದ ಗೋಲ್ಡನ್ ಜ್ಯುಬಿಲಿ ಹಾಲ್, ಗ್ರೀನ್ ಗಾರ್ಡನ್, ಸೃಜನಾ ಆಡಿಟೋರಿಯಂ ಮತ್ತು ಕೆಸಿಡಿ ಪುಟ್‌ಬಾಲ್ ಗ್ರೌಂಡ್‌ದಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಭಾಗವಹಿಸುವ ಶಿಬಿರಾರ್ಥಿ/ ಕಲಾರ್ಥಿಗಳಿಗೆ ವಿಶ್ವವಿದ್ಯಾಲಯದ ಎಲ್ಲ ವಸತಿಗೃಹಗಳಲ್ಲಿ ವಾಸ್ತವ್ಯದ ವ್ಯವಸ್ಥೆಯನ್ನು ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ನಿರ್ದೇಶಿಸಿರುವುದರಿಂದ, ಹಾಸ್ಟೇಲ್, ಆಡಿಟೋರಿಯಂ ಹಾಗೂ ಇತರೇ ಮೂಲಸೌಕರ್ಯ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಆರ್ಥಿಕ ಅನುದಾನಕ್ಕೆ ಜಿಲ್ಲಾಧಿಕಾರಿಗಳು, ಧಾರವಾಡ ಇವರು ಸಲ್ಲಿಸಿದ ಪ್ರಸ್ತಾವನೆಗೆ, ಆರ್ಥಿಕ ಇಲಾಖೆಯ ಅನುಮೋದನೆ ಮೇರೆಗೆ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ಪತ್ರ ಸಂಖ್ಯೆ ಇಡಿ 01 ಹೆಚ್‌ಪಿಯು 2023 ದಿನಾಂಕ 07.01.2023ರಂದು ಕೆಲವೊಂದು ಷರತ್ತುಗಳಿಗೊಳಪಟ್ಟು, ರೂ.2.00 ಕೋಟಿಗಳ ಅನುದಾನವನ್ನು ಬಳಕೆ ಮಾಡಿಕೊಳ್ಳಲು ಅನುಮತಿಸಿದಂತೆ, ಸದರಿ ಮೂಲಸೌಕರ್ಯಗಳನ್ನು ಒದಗಿಸಲು ಬಹಳ ಕಡಿಮೆ ಸಮಯವಿರುವುದರಿಂದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯ ಎಲ್ಲಾ ವಸತಿನಿಲಯಗಳು, ಆಡಿಟೋರಿಯಂ ಹಾಗೂ ಇತರೇ ಮೂಲಸೌಕರ್ಯ, ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಅಧಿಸೂಚನೆ ಸಂಖ್ಯೆ ಆಇ 294 ವೆಚ್ಚ–12/20212 ದಿನಾಂಕ 27.06.2022ರಂತೆ ನಿರ್ಮಿತಿ ಕೇಂದ್ರದಿಂದ ಕ್ರಮ ವಹಿಸಬೇಕೆಂದು ನಿರ್ಣಯಿಸಿತು.



09/1/23
ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–02: ವಿಷಯ–**: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೃಹ ರಕ್ಷಕರ ನಿಯೋಜನೆ ಕುರಿತು.

**ಟಿಪ್ಪಣಿ:**

ಮಾನ್ಯ ಕುಲಸಚಿವರ ಪತ್ರ ದಿನಾಂಕ: 30.12.2022 ರಲ್ಲಿ ಆರಕ್ಷಕ ಮಹಾ ನಿರ್ದೇಶಕರು ಹಾಗೂ ಗೃಹ ರಕ್ಷಕ ದಳದ ಮಹಾ ಸಮಾದೇಷ್ಟರು ಮತ್ತು ನಿರ್ದೇಶಕರು, ಪೌರರಕ್ಷಣೆ ಕೇಂದ್ರ ಕಛೇರಿ ನಂ. 1, ಮೊದಲಿಯಾರ್ ರಸ್ತೆ, ಬೆಂಗಳೂರು 560042 ಇವರಿಗೆ ಪತ್ರ ಬರೆಯಲಾಗಿದ್ದು ಸದರ ಪತ್ರದ ಸಾರಾಂಶ ಈ ಕೆಳಗಿನಂತೆ ಇರುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯವು ಕರ್ನಾಟಕದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಇದು ಸನ್ 1949 ರಲ್ಲಿ ಸ್ಥಾಪನೆಗೊಂಡಿದ್ದು, ಸುಮಾರು 888 ಎಕರೆ ವಿಸ್ತಾರದ ಕ್ಯಾಂಪಸ್ ಹೊಂದಿರುತ್ತದೆ. ಕಾರವಾರ, ಗದಗ, ಹಾವೇರಿ ಜಿಲ್ಲೆಗಳಲ್ಲಿ 3 ಪಿಜಿ. ಸೆಂಟರ್‌ಗಳು, 275 ಕಾಲೇಜುಗಳು ಹಾಗೂ 52 ವಿಭಾಗಗಳನ್ನು ಈ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಮಾರು 2 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ವ್ಯಾಸಾಂಗ ಮಾಡುತ್ತಿದ್ದಾರೆ ಹಾಗೂ ಸರಿ ಸುಮಾರು 2 ಸಾವಿರಕ್ಕಿಂತಲೂ ಹೆಚ್ಚು ಸಿಬ್ಬಂದಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಾರೆ. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಹಲವಾರು ಬಸ್ ನಿಲ್ದಾಣಗಳು, ಕ್ಯಾಂಪಸ್‌ಗಳು, ವಿಭಾಗಗಳು ಇರುವುದರಿಂದ ಇಲ್ಲಿ ಬರುವ ಸಿಬ್ಬಂದಿ ವರ್ಗದವರಿಗೆ, ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸುರಕ್ಷತೆಯ ಸೌಲಭ್ಯವನ್ನು ಕಲ್ಪಿಸುವ ಜವಾಬ್ದಾರಿಯು ವಿಶ್ವವಿದ್ಯಾಲಯದ್ದಿರುತ್ತದೆ.

ಆದ್ದರಿಂದ ಸಿಬ್ಬಂದಿ ವರ್ಗದವರ, ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿಶ್ವವಿದ್ಯಾಲಯಕ್ಕೆ ಭದ್ರತಾ ಕಾರ್ಯಕ್ಕಾಗಿ ಮಾತ್ರ ನಿಯೋಜಿಸಿಕೊಳ್ಳುವ ಉದ್ದೇಶದಿಂದ 107 ಗೃಹ ರಕ್ಷಕ ದಳದ ಸಿಬ್ಬಂದಿಯ ನಿಯೋಜನೆಯು ಅತಿಅವಶ್ಯವಿರುತ್ತದೆಂದು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ. ಅವುಗಳ ವಿವರ ಈ ಕೆಳಗಿನಂತಿದೆ :

1. ಕೆಯುಡಿ ಆವರಣ : 60 ಗೃಹ ರಕ್ಷಕ ದಳದ ಸಿಬ್ಬಂದಿಗಳು
2. ಕೆಸಿಡಿ ಆವರಣ : 40 ಗೃಹ ರಕ್ಷಕ ದಳದ ಸಿಬ್ಬಂದಿಗಳು
3. ಪಿಜಿ ಸೆಂಟರ್ ಗದಗ : 03 ಗೃಹ ರಕ್ಷಕ ದಳದ ಸಿಬ್ಬಂದಿಗಳು
4. ಪಿಜಿ ಸೆಂಟರ್ ಕಾರವಾರ : 03 ಗೃಹ ರಕ್ಷಕ ದಳದ ಸಿಬ್ಬಂದಿಗಳು
5. ಪಿಜಿ ಸೆಂಟರ್ ಹಾವೇರಿ : 01 ಗೃಹ ರಕ್ಷಕ ದಳದ ಸಿಬ್ಬಂದಿಗಳು (ಹೊಸ ವಿಶ್ವವಿದ್ಯಾಲಯ ಸ್ಥಾಪನೆಗೊಳ್ಳುವ ಸಮಯದವರೆಗೆ ಮಾತ್ರ)

ಮುಂದುವರಿದು, ಈಗಾಗಲೇ ಒಟ್ಟು 80 ಜನ ಸೆಕ್ಯೂರಿಟಿಯವರ ಕಾರ್ಯನಿರ್ವಹಿಸುತ್ತಿದ್ದು ಸದರಿಯವರ ಸಂಭಾವನೆಯ ಒಂದು ತಿಂಗಳಿಗೆ ರೂ.11,93,448/–ಗಳಾಗಿರುತ್ತದೆ. ಅದರಂತೆ ಕವಿವಿ ಒಬ್ಬ ಸೆಕ್ಯೂರಿಟಿಯ ಒಂದು ತಿಂಗಳ ವೇತನ 14,593/–ಗಳು(ಇ.ಎಸ್.ಐ & ಪಿ.ಎಫ್ ಸೇರಿ).

ಸದರ ವಿಷಯವನ್ನು ಸಿಂಡಿಕೇಟ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೃಹ ರಕ್ಷಕರ ನಿಯೋಜನೆಯ ಪ್ರಸ್ತಾವನೆಯ ಬಗ್ಗೆ ಸುವಿಸ್ತಾರವಾಗಿ ಚರ್ಚಿಸಲು ವಿಷಯವನ್ನು ಮುಂದೂಡಲು ಸಭೆಯು ನಿರ್ಣಯಿಸಿತು.**

09/01/23



ಕುಲಸಚಿವರು

ಕುಲಪತಿಗಳು